**ಸಿ.ಸಿ ನಂ. 1447/2025**

ಪಿ.ಡಬ್ಲ್ಯು 1

(ಇಂದು ದಿನಾಂಕಃ **11-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು -ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದ**

ನಿಪಿ-7ನ್ನು ಆರೋಪಿತನು ನಮ್ಮ ಬ್ಯಾಂಕಿಗೆ ಬಂದಾಗ ತುಂಬಿರುತ್ತಾನೆ. ನಿಪಿ-7ರ ಕುರಿತಾಗಿ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ದಾಖಲಾತಿಗಳ ಆಧಾರ ಮೇಲೆ ಮಾಹಿತಿ ಇದೆ. ನಿಪಿ-8 ರಿಂದ 10ನ್ನು ಆರೋಪಿತನ ಹೇಳಿಕೆಯಂತೆ ಭರಣ ಮಾಡಿರುತ್ತೇವೆ. ನಿಪಿ-8 ರಿಂದ 10ರ ಮೇಲೆ ನನಗೆ ದಾಖಲಾತಿಗಳ ಆಧಾರದ ಮೇಲೆ ನನಗೆ ಮಾಹಿತಿ ಇದೆ. ನಿಪಿ-7ರಿಂದ 10ರಲ್ಲಿ ಆರೋಪಿತನ ಹೇಳಿಕೆಯ ಆಧಾರದ ಮೇಲೆ ಬರೆದಿರುವ ಕುರಿತಾಗಿ ನಮೂದು ಇರುವುದಿಲ್ಲ. ನಿಪಿ-7 ರಿಂದ 10ನ್ನು ಆರೋಪಿತನ ಹೇಳಿಕೆಯ ಆಧಾರದ ಮೇಲೆ ಬರೆದಿದ್ದೇವೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ.

ಜೂನ್-2025 ರಿಂದ ನಾನು ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಪೂರ್ವದಲ್ಲಿ ಸುಬ್ರಹ್ಮಣ್ಯ ಹೆಗಡೆಯವರು ಅವರಿಕ್ಕಿಂತ ಪೂರ್ವದಲ್ಲಿ ಸಹನ ಗುಣಿ ಎಂಬುವವರು ಇದ್ದರು. ಈ ಪ್ರಕರಣದ ಸಾಲವು ಸಹನ ಗುಣಿಯವರು ಇದ್ದ ಸಂದರ್ಭದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಹನ ಗುಣಿಯವರು ಕಾಗದ ಪತ್ರಗಳಲ್ಲಿ ಅವ್ಯವಹಾರ ಮಾಡಿದ್ದಾರೆ ಎಂಬ ಕಾರಣದಿಂದಾಗಿ ಮುಖ್ಯ ಕಚೇರಿಗೆ ಆದೇಶದ ಮೇರೆಗೆ ರಾಜಿನಾಮೆ ನೀಡಿದ್ದಾರೆ ಎಂದರೆ ಸರಿಯಲ್ಲ. ಅವರು ಅವರ ವೈಯಕ್ತಿಕ ಕಾರಣಕ್ಕಾಗಿ ರಾಜಿನಾಮೆಯನ್ನು ನೀಡಿರುತ್ತಾರೆ. ಅವರು ಕಾಗದ ಪತ್ರಗಳ ಅವ್ಯವಹಾರಕ್ಕೆ ಸಂಬಂಧಿಸಿದಂತೆ ರಾಜಿನಾಮೆ ನೀಡಿದ್ದರೂ ಸಹ ಅವರು ವೈಯಕ್ತಿಕ ಕಾರಣಕ್ಕಾಗಿ ರಾಜಿನಾಮೆ ನೀಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಿ.ಸಿ ನಂ. 1447/2025**

ಪಿ.ಡಬ್ಲ್ಯು.1

ಈ ಪ್ರಕರಣದಲ್ಲಿ ಸಾಲವನ್ನು ನೀಡುವ ಸಂದರ್ಭದಲ್ಲಿ ಆರೋಪಿತನಿಗೆ ಮಗ ಇದ್ದಾನೆ ಎಂದು ಖಚಿತಪಡಿಸಿಕೊಳ್ಳಲು ರೇಶನ್ ಕಾರ್ಡನ್ನು ಪಡೆದುಕೊಂಡಿರುತ್ತೇವೆ. ಸದರಿ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ